<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

**<u>ಕೆ.ಆರ್.ನಗರ</u>**

**<u>ಒ.ಎಸ್ 417/2016</u>**

**ಪಿಡಬ್ಲ್ಯೂ1**

**<u>ದಿನಾಂಕ 09/03/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಶ್ರೀ. ಎಂ.ಡಿ ವಕೀಲರಿಂದ 1 ನೇ ಪ್ರತಿವಾದಿ ಪರ ವಕೀಲರುಃ</u>

ದಾವಾ ಸ್ವತುಗಳು ಮೂಲತಃ ಗಿಡ್ಡಶೆಟ್ಟಿ ನನ್ನ ತಾತರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆ ಮುದ್ದಶೆಟ್ಟಿ ಹಾಗೂ ಅವರ ಸಹೋದರನ ಮಗ ಜವರಶೆಟ್ಟಿ ನಡುವೆ ಪಂಚಾಯಿತು ಪಾರಿಕತ್ತು ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾತ ಮೃತಪಟ್ಟ ನಂತರ ದಾವಾ ಸ್ವತ್ತುಗಳ ಖಾತೆ ನನ್ನ ತಂದೆ ಹೆಸರಿಗೆ ಬಂತು ಎಂದರೆ ಸರಿ. ನನ್ನ ತಂದೆ ಮೃತ ಪಟ್ಟ ನಂತರ ದಾವಾ ಸ್ವತ್ತುಗಳ ಖಾತೆ ನನ್ನ ತಾಯಿ ಹೆಸರಿಗೆ ಬಂತು ಎಂದರೆ ಸರಿ. ನನ್ನ ತಾಯಿ ಮೃತಪಟ್ಟ ನಂತರ ಸದರಿ ಸ್ವತ್ತುಗಳನ್ನು ನಾನು ಹಾಗೂ ಪ್ರತಿವಾದಿಗಳು ಇರುವಂತಹ ಹಾಗೂ ಮಾಲಿಕತ್ವ ಹೊಂದಿರುವಂತಹ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ.

2. ಒಂದನೇ ಪ್ರತಿವಾದಿ ಮೈಸೂರಿನ ವಾಸ ಎಂದರೆ ಸರಿ. ನನ್ನ ತಾಯಿ ಮೃತ ಪಟ್ಟ ನಂತರ 3 ಮತ್ತು 4 ನೇ ಪ್ರತಿವಾದಿ ದಾವಾ ಸ್ವತ್ತುಗಳಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ನಾವೆಲ್ಲರೂ ಉಳುಮೆ ಮಾಡುತ್ತಿದ್ದೇವು, ನನ್ನ ಹೆಸರಿಗೆ ಖಾತೆ ಮಾಡಿಕೊಡದ ಕಾರಣ ಈ ದಾವೆ ಹೂಡಿದ್ದೇನೆ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನನ್ನ ತಂದೆಗೆ ಇನ್ನೂ ಇತರೇ ಆಸ್ತಿಗಳು ಇವೆ ಎಂದರೆ ನನಗೆ ತಿಳಿದಿರುವಷ್ಟು ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾವೆ ಹೂಡಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

3. ದಾವಾ ಸ್ವತ್ತುಗಳಲ್ಲಿ ಬರುತ್ತಿರುವ ಎಲ್ಲಾ ಆದಾಯಗಳನ್ನು ನಾನು ಹಾಗೂ 3 ಮತ್ತು 4 ನೇ ಪ್ರತಿವಾದಿ ತೆಗೆದುಕೊಳ್ಳುತ್ತಿದ್ದೇವೆ ಎಂದರೆ ಎಲ್ಲರೂ ತೆಗೆದುಕೊಳ್ಳುತ್ತಿದ್ದೇವು

ಎಂದು ಸಾಕ್ಷಿಯು ನುಡಿಯುತ್ತಾರೆ. ದಾವಾ ಸ್ವತ್ತುಗಳಲ್ಲಿ ಬರುವ ಆದಾಯವನ್ನು 1 ನೇ ಪ್ರತಿವಾದಿ ತೆಗೆದುಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿದ್ದ ಮರಗಳನ್ನು ಕಡಿದು ಮಾರಾಟ ಮಾಡಿರುವುದು 3 ಮತ್ತು 4 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಿರುದ್ಧ ವಿನಾಕಾರಣ ದಾವಾ ಸ್ವತ್ತುಗಳಲ್ಲಿ ಬರುತ್ತಿರುವ ಉತ್ಪತ್ತಿಯನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಆರೋಪ ಮಾಡಿದ್ದೀರ ಎಂದರೆ ಸರಿಯಲ್ಲ.

ಈ ಹಂತದಲ್ಲಿ 3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಹಾಜರುಇಲ್ಲದೇ ಇರುವ ಕಾರಣ ಹಾಗೂ ತಕರಾರು ಹಾಕದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ. 5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದುಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ